ಹಿಂದೆಯೇ ಹೆಣ್ಣುಮಕ್ಕಳು ಅಳುತ್ತಾ ಓಡಿದರು.

ಅಷ್ಟರಾಗಲೇ ಇಡೀ ಊರ ಜನ ಅಲ್ಲಿ ಜಮಾಯಿಸಿಬಿಟ್ಟಿದ್ದರು. ನೆನ್ನೆ ತಾನೇ ಹುಡುಗಿ ನೋಡಿಕೊಂಡು ಬಂದವ್ನೆ, ಇವತ್ತಾಗಲೇ ಏನಾಗಿತ್ತು. ಹುಡುಗಿ ಇಷ್ಟ ಇಲ್ಲ ಅಂದಿದ್ದರೆ, ಬ್ಯಾಡಾ ಅನ್ನಬೋದಿತ್ತು, ನಂಗೆ ಆ ಎಣ್ಣು ಬ್ಯಾಡಾ ಅಂದಿದ್ರೆ ಆಗ್ತಿತ್ತಪ್ಪ. ಅದಕ್ಕೆ ಪ್ರಾಣನೇ ಕಳ್ಕೋಳೋದಾ ಅಂತ ತಲೆಗೊಂದು ಮಾತಾಡುತ್ತಾ ನಿಂತಿದ್ದರು. ಯಾರೋ ಪೊಲೀಸ್ನೋರಿಗೆ ಫೋನ್ ಮಾಡಿದ್ರು ಅಂತ ಕಾಣುತ್ತೆ. ಸುಮಾರು ಹೊತ್ತಾದ ಮೇಲೆ ಪೊಲೀಸಿನವರು ಬಂದರು. ಗುಂಪು ಸೇರಿದ್ದ ಜನರನ್ನು ಚದುರಿಸುತ್ತಾ 'ದೂರ ಹೋಗಿ, ದೂರಾ ಹೋಗಿ' ಅಂತ ಗಾಳಿಗೆ ಲಾಟಿಯನ್ನು ಬೀಸಿದರು. ಏಟು ಎಲ್ಲಿ ಬೀಳುತ್ತದೆಯೊ ಅಂತ ಮರದ ಸುತ್ತ ಸುತ್ತುವರಿದಿದ್ದ ಜನರೆಲ್ಲ ಹಿಂದಕ್ಕೆ ಓಡಿದರು. ಪೊಲೀಸರು ಅವರ ಕೆಲಸದಲ್ಲಿ ನಿರತರಾದರು. ಗಜಾನನ ನೇತಾಡುತ್ತಿದ್ದುದನ್ನು ವಿವಿಧ ಕೋನಗಳಿಂದ ಫೋಟೊ ತೆಗೆದು ಹೆಣವನ್ನು ಕೆಳಗಿಳಿಸಿದರು. ಅಲ್ಲಿಯೇ ಉದ್ದಕ್ಕೆ ಮಲಗಿಸಿದರು. ಮುಂದಿನ ಕ್ರಮಕ್ಕಾಗಿ ಆಸ್ಪತ್ರೆಗೆ ಸಾಗಿಸಬೇಕಾಗಿರುವುದರಿಂದ ಆಸ್ಪತ್ರೆಯಿಂದ ಬರುವ ಆ್ಯಂಬುಲೆನ್ಸ್‌ಗಾಗಿ ಕಾಯ ಹತ್ತಿದರು.

ನೆನ್ನೆವರೆಗೂ ಜೀವಂತವಾಗಿದ್ದ, ಎದೆವರೆಗೂ ಬೆಳೆದು ನಿಂತಿದ್ದ ಮಗ ಈಗ ಹೆಣವಾಗಿ ಮಲಗಿರುವುದನ್ನು ಕಂಡು ದೇವಪ್ಪನಿಗೆ ಎದೆ ಒಡೆದು ಹೋದಂತಾಗಿ, 'ಮಗನೇ, ಹಿಂಗ್ಯಾಕೆ ಮಾಡಿಕೊಂಡ್ಯೊ, ನಿಂಗೆ ಸಾಯೊ ಅಂಥದ್ದೇನಾಗಿತ್ತು, ಗಜಾನನ... ನಂಗೆ ಯಾರೋ ದಿಕ್ಕು' ಅಂತ ಜೋರಾಗಿ ಎದೆ ಎದೆ ಬಡಿದುಕೊಳ್ಳುತ್ತಾ ರೋದಿಸತೊಡಗಿದ. ಅವನ ಹೆಣ್ಣುಮಕ್ಕಳ ದುಃಖವೂ ಮೇರೆ ಮೀರಿತ್ತು. 'ಗಜಾ, ಗಜಾಲೊ, ನಿನ್ನ ಮದ್ವೆ ಮಾಡಾಣ ಅಂತ ಬಂದ್ರೆ, ತಿಥಿ ಮಾಡ್ಕೊಳ್ಳೊ ಅಂಗೆ ಮಾಡ್ಕೊಂಡು ಬುಟ್ಟೆಯಲ್ಲೊ, ಈ ಮದ್ವೆ ಬ್ಯಾಡಾ ಅಂದಿದ್ರೆ ಬ್ಯಾರೆ ಎಣ್ಣು ಉಡ್ಕತ್ತಿದ್ದವಲ್ಲೊ, ನೆನ್ನೆ ತಾನೆ ನಮ್ಜೊತೆ ಏಟೊಂದು ವೈನಾಗಿ ಮಾತಾಡಿದ್ದಲ್ಲೊ. ನಮ್ಮನ್ನ ಕರೆದು ಕಳ್ಸೋರು ಯಾರೋ ಇನ್ಮುಂದೆ... ಅಪ್ಪಯ್ಯ ಎಂಗೊ ಇರುತ್ತೆ, ನಡ್ನೀರಾಗೆ ಕೈಬುಟ್ಟು ವೊಂಟೋದೆಯಲ್ಲೊ' ಅಂತ ಅಕ್ಕತಂಗೀರು ಜೋರಾಗಿ ಅಳುತ್ತಿದ್ದರೆ, ಅಲ್ಲಿದ್ದವರು ಕೂಡ ಅವರ್ಜೊತೆ ಕಣ್ಣಲ್ಲಿ ನೀರಾಕ್ಕೊಂಡು ಅಳ್ತಾ ಇದ್ರು. ಪೊಲೀಸಿನವರು ಮುಂದಿನ ಕ್ರಮಗಳನ್ನು ಮಾಡೋಕೆ ಶುರು ಮಾಡಿದ್ರು. ಹಳ್ಳಿಯ ಜನರೆಲ್ಲ ವಿಷಾದಭರಿತರಾಗಿ ನೋಡ್ತಾ ನಿಂತುಕೊಂಡರು.

ಸುದ್ದಿ ತಿಳಿದು ಗಜಾನನನ ಜೊತೆ ನಾಟಕ ಮಾಡ್ತಾ ಇದ್ದವರು ಓಡೋಡಿ ಬಂದ್ರು. ಗಜಾನನನಿಗೆ ಅತ್ಯಂತ ಆತ್ಮೀಯನಾಗಿದ್ದ ರುದ್ರೇಶನ ದುಃಖ ಹೇಳತೀರದು. 'ನನಗೂ ಒಂದು ಮಾತು ಹೇಳದೆ ಹೋಗೇಬಿಟ್ಟ ಗಜಾ, ಸಾಯೋಕೆ ಮುಂಚೆ ನನ್ನ ನೆನಪಾಗಲಿಲ್ಲವೇನೊ, ನಾಳೆ ಬರ್ತೀನಿ ಅಂತ ಹೋಗಿದ್ದೆಯಲ್ಲೊ, ಮತ್ತೆ ವಾಪಸ್ಸು ಬರದೇ ಇರೋ ಅಂಗೆ ಹೋಗೇ ಬಿಟ್ಟೆಯಲ್ಲೊ... ಹೆಂಗೊ ನಿನ್ನ ಬಿಟ್ಟು ಇರಲಿ, ನಾನೂ ನಿನ್ನ

## ಕಳೆದ ಸಂಚಿಕೆಯಲ್ಲಿ



ಹೆಣ್ಣು ಮಕ್ಕಳ ಬಟ್ಟೆ ಹಾಕಿಕೊಂಡು, ಬಳೆ ತೊಟ್ಟುಕೊಂಡು ಹುಡುಗಿಯಂತೆ ಆಡುತ್ತಿದ್ದ ಮಗನನ್ನು ಕಂಡು ವಾರಿಜಾ ಕೋಪಗೊಂಡು ಸಿಡಿದಳು. ಅವಳ ಸಿಟ್ಟು ನೋಡಿ ಮನೆಯವರೆಲ್ಲ ಬೇಸರಗೊಂಡರು. ಮಾದೇವನಿಗೂ ಹೆಂಡತಿಯ ಮೇಲೆ ಕೋಪ ಬಂತು. ಮನೆಯಲ್ಲಿನ ಪರಿಸ್ಥಿತಿಯನ್ನು ನೋಡಿದ ಅಂಬಿಕಾ, ಇನ್ನು ವಿಳಂಬ ಮಾಡದೆ ಅಣ್ಣತಮ್ಮಂದಿರು ಪ್ರತ್ಯೇಕವಾಗಿ ವಾಸಿಸುವುದೇ ಒಳ್ಳೆಯದೆಂದು ಜಗದೀಶನಿಗೆ ಸಲಹೆ ನೀಡಿದಳು. ಅಕ್ಕನ ಸಲಹೆಗೆ ಇಲ್ಲವೆನ್ನುವುದು ಈ ಬಾರಿ ಮಾದುವಿಗೂ ಸಾಧ್ಯವಾಗಲಿಲ್ಲ. ಮನೆಯ ನಡುವೆ ಗೋಡೆ ಎದ್ದಿತು. ಅಣ್ಣತಮ್ಮಂದಿರು ಬೇರೆ ಬೇರೆ ವಾಸಿಸತೊಡಗಿದರೂ, ಅವರ ಮನಸ್ಸು ಒಂದಾಗಿಯೇ ಇತ್ತು. ಮನೆ ಎರಡಾದುದು ಶಾಂಭವಿ–ವಾರಿಜಾರಿಗೆ ಸಂತೋಷ ತಂದಿತ್ತು. ನಿರುಮ್ಮಳವಾಗಿ ಸಾಗುತ್ತಿದ್ದ ಮನೆಗಳ ನಡುವೆ ಮತ್ತೆ ಕ್ಷೋಭೆ ಎದುರಾಗಲು ವೀರುವೇ ಕಾರಣನಾದ. ಈ ಬಾರಿ ಹುಡುಗಿಯ ವೇಷ ತೊಟ್ಟ ಅವನನ್ನು ವಾರಿಜಾ ತೀವ್ರವಾಗಿ ಶಿಕ್ಷಿಸಿ, ಬರೆ ಹಾಕಿದಳು. ಅಳುತ್ತಿದ್ದ ಹುಡುಗನನ್ನು ಕಂಡು ಎಲ್ಲರೂ ವಾರಿಜಾಳ ಮೇಲೆ ಕೋಪ ಮಾಡಿಕೊಂಡರು. ಗಾಯಗೊಂಡ ಮಗುವನ್ನು ಶಾಂಭವಿ ಸಂತೈಸತೊಡಗಿದಳು. ಮಗುವಿನ ಸಂಕಟ ನೋಡಿ ಜಗದೀಶ ಕೂಡ ಬೇಸರ ಮಾಡಿಕೊಂಡ.

ಜೊತೇನೆ ಬಂದು ಬಿಡ್ತೀನಿ ಕಣೊ ಗಜಾ' ಎಂದು ಗೆಳೆಯನ ಬಳಿ ಧಾವಿಸುತ್ತಾ ಅವನನ್ನು ತಬ್ಬಿ ಅಳತೊಡಗಿದ. ಗಜಾನನನ ತಂದೆ ಮತ್ತು ಅವನ ಅಕ್ಕ ತಂಗಿಯರಿಗಿಂತ ರುದ್ರೇಶನ ಅಳು ಹೆಚ್ಚಾಗಿತ್ತು. ಎದೆ ಬಿರಿಯುವಂತೆ ರೋದಿಸುತ್ತಿದ್ದ ಅವನನ್ನ ಕಂಡು ಅಲ್ಲಿದ್ದವರೆಲ್ಲ, 'ಪಾಪ, ಗೆಳೆಯನ ಮೇಲೆ ಎಷ್ಟೊಂದು ಪ್ರೀತಿ ಇಟ್ಟುಕೊಂಡಿದ್ದಾನೆ' ಅಂತ ಅಂದುಕೊಂಡರು. ಎಷ್ಟು ಸಮಾಧಾನ ಮಾಡಿದ್ರೂ ರುದ್ರೇಶ ಅಳು ನಿಲ್ಲಿಸಲಿಲ್ಲ. ಸತ್ತು ಉದ್ದಕ್ಕೂ ಮಲಗಿರುವ ಗೆಳೆಯನ ಬಳಿ ಹೋಗಿ ಅವನ ಮೇಲೆ ಬಿದ್ದು ಹೊರಳಾಡುತ್ತಾ 'ಗಜಾ ಗಜಾ' ಅಂತ ಹೃದಯ ಬಿರಿಯುವಂತೆ ಅಳುತ್ತಿದ್ದವನನ್ನು ಕಂಡ ಅಲ್ಲಿದ್ದವರು, 'ಇದೇನು ಇವ್ನು, ಕಟ್ಕೊಂಡ ಹೆಂಡ್ತಿ ಸತ್ತ ಹಾಗೆ ಅಳ್ತಾ ಇದ್ದಾನಲ್ಲ. ಅವನು ಸ್ನೇಹಿತ ಮಾತ್ರ, ಎಷ್ಟೇ ಹತ್ತಿರದ ಗೆಳೆಯನಾದ್ರೂ ಈ ಪಾಟಿ ಅಳ್ತಾರಾ?' ಅಂತ ತಮ್ಮೊಳಗೆ ಮಾತನಾಡಿಕೊಂಡರು. ಆದರೆ ಈ ಬಗ್ಗೆ ಇನ್ನೂ ಹೆಚ್ಚು ಗಮನ ಕೊಡುವಷ್ಟು ಸಮಯ ಸಂದರ್ಭ ಅದಾಗಿರದ ಕಾರಣ ಮುಂದಿನ ಕೆಲಸಗಳತ್ತ ಗಮನ ಕೇಂದ್ರೀಕರಿಸಿದರು.

ಸಮಯವಾಗುತ್ತ ಬಂದಿತೆಂದು ಪೊಲೀಸರು ಅಲ್ಲಿದ್ದ ಜನರನ್ನು ಚದುರಿಸಿ, ಗಜಾನನನ ದೇಹವನ್ನು ಅಲ್ಲಿಂದ ತೆಗೆಯಲು ಅವಸರಿಸಿದರು. ಆಸ್ಪತ್ರೆಯವರು ದೇಹವನ್ನು ಸ್ಟ್ರೆಚರ್ ಮೇಲೆ ಇರಿಸಿಕೊಂಡು ಪೋಸ್ಟ್ ಮಾರ್ಟಂಗಾಗಿ ಆ್ಯಂಬುಲೆನ್ಸಿನಲ್ಲಿ ಆಸ್ಪತ್ರೆಗೆ ಕೊಂಡೊಯ್ದರು. ಪೋಸ್ಟ್‌ಮಾರ್ಟಂ ಮಾಡಿ ಅಂದು ಗಜಾನನನ ದೇಹವನ್ನು ಕೊಟ್ಟಾಗ ಸಂಜೆಯಾಗಿತ್ತು. ಅತ್ತು ಸುಸ್ತಾಗಿದ್ದ ಅಕ್ಕಂದಿರು ಮತ್ತು ಅಪ್ಪ ಅಳಲು ತ್ರಾಣವಿಲ್ಲದೆ ಬೇರೊಬ್ಬರ ನೆರವಿನಿಂದ ಸಂಸ್ಕಾರದ ಜಾಗಕ್ಕೆ ನಡೆದು ಬಂದರು. ಗಜಾನನನ ನೇಣು ಹಾಕಿಕೊಂಡಿದ್ದ ಮರವಿದ್ದ ಹೊಲದಲ್ಲಿಯೇ ದೇಹವನ್ನು ಸುಡಲು ಏರ್ಪಾಡು ಮಾಡಿಕೊಂಡಿದ್ದರು. ನೆಂಟರಿಷ್ಟರೆಲ್ಲ ಬಂದು ಕಾಯ್ದು ಕುಳಿತಿದ್ದರು. ಎಲ್ಲರ ರೋದನದೊಡನೆ ಮೃತನ ದೇಹ ಅಗ್ನಿಗೆ ಆಹುತಿಯಾಯಿತು. ರುದ್ರೇಶ ಅಂತೂ ಅದೇ ಬೆಂಕಿಗೆ ಬೀಳಲು ಹೋಗುತ್ತಿದ್ದ. ಅವನ ಜೊತೆಯವರು ಗಟ್ಟಿಯಾಗಿ ಅವನನ್ನು ಹಿಡಿದುಕೊಂಡಿದ್ದರು. ಅವನ ದುಃಖ ವಿಚಿತ್ರ ಎನಿಸುತ್ತಿದ್ದರೂ, ಯಾರೊಬ್ಬರೂ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. 'ಅಯ್ಯೋ ಪಾಪ, ಗಜಾನನ ಎಷ್ಟು ಒಳ್ಳೆಯ ಹುಡುಗ, ಒಬ್ಬರ ಬಳಿ ಕೂಡ ಇದುವರೆಗೂ ಛೀ ಥೂ ಅಂತ ಅನ್ನಿಸಿಕೊಂಡಿರಲಿಲ್ಲ. ಅಷ್ಟು ಒಳ್ಳೆಯ ಹುಡುಗ ಯಾಕೀಗೆ ಮಾಡಿಕೊಂಡನೊ' ಅಂತ ಊರಿನವರು, ಅವನ ಗೆಳೆಯರು, ಬಂಧುಬಳಗದವರು ಪರಿತಾಪ ಪಟ್ಟರು. ಅಂದೆಲ್ಲ ಊರಿನವರಿಗೆ ಬೇಸರವೊ ಬೇಸರ, ಇನ್ನು ಮನೆಯವರಿಗಂತೂ ಅದೆಷ್ಟು ದುಃಖವೊ. ಚಿನ್ನದಂತಹ ಮಗನನ್ನು ಕಳೆದುಕೊಂಡ ಮೇಲೆ ನಾನು ತಾನೆ ಯಾರಿಗಾಗಿ ಬದುಕಬೇಕು, ನಾನೂ ಸತ್ತು ಅವನ ಜೊತೆ ಸೇರುತ್ತೇನೆ ಅಂತ ದುಃಖಿಸುತ್ತಿದ್ದ ಅಪ್ಪನನ್ನು ಕಂಡು ಹೆಣ್ಣುಮಕ್ಕಳಿಗೂ ತಡೆಯಲಾರದ ದುಃಖ. ಇದ್ದ ಒಬ್ಬನೇ ತಮ್ಮ ಸತ್ತು ತಮ್ಮ ತೌರು ಮನೆಯ ದೀಪವೇ ನಂದಿಹೋಗಿದೆ. ಇನ್ನು ನಮಗೆ ಕರೆದು ಕಳಿಸುವವರು ಯಾರು, ಅಪ್ಪನನ್ನು ಈ ವಯಸ್ಸಿನಲ್ಲಿ ನೋಡಿಕೊಳ್ಳುವವರು ಯಾರು, ಎಲ್ಲರಿಗೂ ಮೋಸ ಮಾಡಿ ಬಾರದ ಲೋಕಕ್ಕೆ ಹೋಗಿಬಿಟ್ಟ. ಅಂಥದ್ದೇನು ಆಗಿತ್ತು ಅವನಿಗೆ. ಇಡೀ ರಾತ್ರಿ ಯಾರೊಬ್ಬರೂ ಕಣ್ಣು ಮುಚ್ಚಲಿಲ್ಲ. ಗಜಾನನನ ಒಂದೊಂದು ನಡೆ ನುಡಿ ಮಾತುಗಳನ್ನು ನೆನೆಸಿಕೊಂಡೇ ಬೆಳಗು ಹರಿಸಿದರು.

ಮನೆಯ ತುಂಬಾ ನೆಂಟರಿಷ್ಟರು ತುಂಬಿದ್ದರು. ಹೊರಗೆ ಗಜಾನನನ ಗೆಳೆಯರು ಮಲಗಿಕೊಂಡಿದ್ದರು. ಅವರಲ್ಲಿಯೂ ಯಾರೂ ನಿದ್ದೆ ಮಾಡಲಿಲ್ಲ. ಅವನ ಒಳ್ಳೆಯತನ, ಗೆಳೆಯರಿಗಾಗಿ ಮಿಡಿವ ಹೃದಯ, ಕಷ್ಟಸುಖಗಳಲ್ಲಿ ಭಾಗಿಯಾಗುತ್ತಿದ್ದ ಅವನ ಸರಳತೆ, ಸ್ಟೇಜ್ ಮೇಲೆ ಬಂದರೆ ಸಾಕ್ಷಾತ್ ಪಾತ್ರವೇ ಆಗಿಬಿಡುವ ಅದ್ಭುತ